ಮೀಸಲಿಟ್ಟಿದ್ದೇವೆ ಎಂದು ಹೇಳಿದರು. ಈ ಕಾರ್ಯಕ್ರಮ ಮಾಡಿದ್ದು ಹಿಂದಿನ ಸಾಲಿನಲ್ಲಿ ಆದರೆ ಎಷ್ಟು ಪ್ರಗತಿಪರವಾಗಿ ಕೆಲಸ ನಡೆದಿದೆಯೆಂದು ಮಾಹಿತಿ ಇಲ್ಲ. ಇಲ್ಲಿಯವರೆಗೆ ಹಣ ಖರ್ಚಾಗಿಲ್ಲಿ ಈ ಕಾರ್ಯಕ್ರಮ ಯಶಸ್ವಿ ಆಗಬೇಕಾದ ಸಂದರ್ಭದಲ್ಲಿ ಇಡೀ ರಾಜ್ಯದಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕಾಗುತ್ತದೆ. ಆದ್ದರಿಂದ ಅದಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಹಣ ಒದಗಿಸಿಕೊಡಬೇಕಾಗುತ್ತದೆ.

ಅಧ್ಯಕ್ಷರು:- ಹಂತ ಹಂತವಾಗಿ ಇಡೀ ರಾಜ್ಯದಲ್ಲಿ ಮಾಡುತ್ತಾರೆ.

ವಿಷಯ:- ಶಿಗ್ಗಾಂವ್ ಕ್ಷೇತ್ರಕ್ಕೆ ಕುಡಿಯುವ ನೀರಿನ ಯೋಜನೆ.

29(100)

ಶ್ರೀ ಮಂಜುನಾಥ ಸಿ. ಕನ್ನೂರ (ಶಿಗ್ಗಾಂವ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಶಿಗ್ಗಾಂವ್ ಸವಣೂರ, ಬಂಕಾಪುರ ಪಟ್ಟಣಗಳಿಗೆ ವರದಾ ನದಿಯಿಂದ ಕುಡಿಯುವ ನೀರು ಒದಗಿಸುವ ಯೋಜನೆ ಮಂಜೂರಾಗಿದ್ದು ಯಾವಾಗ;

ಆ) ಸದರಿ ಯೋಜನೆಯ ಕಾರ್ಯಸ್ಥಗಿತಗೊಳ್ಳಲು ಕಾರಣಗಳೇನು;

ಇ) ಸದರಿ ಯೋಜನೆಗೆ ಸಂಬಂಧಿಸಿದ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ; ಹಾಗೂ ಅದಕ್ಕೆ ತಗುಲಿದ ಖರ್ಚು ಎಷ್ಟು;

ಈ) ಸದರಿ ಯೋಜನೆಗೆ ಸಂಬಂಧಿಸಿದ ಜಲಸಂಗ್ರಹಾಗಾರ ಹಾಗೂ ಪೈಪ್‌ಲೈನ್ ಕೆಲಸಗಳನ್ನು ಎಷ್ಟು ದಿವಸಗಳಲ್ಲಿ ಪೂರ್ಣಗೊಳಿಸಲಾಗುವುದು?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ದಿನಾಂಕ 9-10-91 ರಂದು ರೂ. 745.00 ಲಕ್ಷಗಳಿಗೆ ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿ ದೊರೆತಿದೆ.

ಆ) ಯೋಜನೆಯಲ್ಲಿ ಮಾರ್ಪಾಡುಗಳನ್ನು ಮಾಡಿ ಅಂದಾಜನ್ನು ಹಾಲಿ ದರಪಟ್ಟಿಗೆ ಪರಿಷ್ಕರಿಸಿ ಆಡಳಿತಾತ್ಮಕ ಮಂಜೂರಾತಿಯನ್ನು ಪಡೆಯಬೇಕಾಗಿರುವುದರಿಂದ ಕಾರ್ಯ ಸದ್ಯಕ್ಕೆ ಸ್ಥಗಿತಗೊಂಡಿದೆ.

ಇ) ಸದರಿ ಯೋಜನೆಗೆ ಸಂಬಂಧಿಸಿದ ನಾಗನೂರ ಕರೆಯ ಸಾಮರ್ಥ್ಯವನ್ನು ಹೆಚ್ಚಿಸುವ ಹಾಗೂ ಒಡ್ಡನ್ನು ಬಲಪಡಿಸುವ ಕೆಲಸ ಪೂರ್ಣಗೊಂಡಿದೆ. ಈ ಕಾಮಗಾರಿಗೆ ಖರ್ಚಾಗಿರುವ ಮೊತ್ತ 12:96 ರವರೆಗೆ ರೂ.621.07 ಲಕ್ಷಗಳು.

ಈ) ಈಗಾಗಲೇ ಪ್ರಸ್ತಾವನೆ ಮಾಡಿರುವಂತೆ ಶಿಗ್ಗಾಂವ್, ಸವಣೂರು ಮತ್ತು ಬಂಕಾಪುರ ಪಟ್ಟಣಗಳಿಗೆ ನೀರನ್ನು ಸರಬರಾಜು ಮಾಡಲು ಯೋಜನೆಯ ಅಂದಾಜು 2020 ಲಕ್ಷ ರೂ.ಗಳಾಗುವುದರಿಂದ ಈಗಾಗಲೆ ಮಂಜೂರಾಗಿರುವ 745 ಲಕ್ಷಗಳಿಗೆ ಸ್ಥಿಮಿತಗೊಳಿಸಿ,

ಯೋಜನೆಯನ್ನು ಶಿಗ್ಗಾಂವ್ ಪಟ್ಟಣಕ್ಕೆ ಸ್ಥಿಮಿತಗೊಳಿಸಲು ಮಂಡಳಿಯೂ ತೀರ್ಮಾನ ಕೈಗೊಂಡಿರುತ್ತದೆ. ಈ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಮಂಜುನಾಥ್ ಸಿ.ಕುನ್ನೂರು:- ಉತ್ತರದಲ್ಲಿ ಶಿಗ್ಗಾಂವ್, ಸವಣೂರು, ಬಂಕಾಪುರ, ಪಟ್ಟಣಗಳಿಗೆ ವರದಾ ನದಿಯಿಂದ ಶಾಶ್ವತವಾದ ಕುಡಿಯುವ ನೀರಿನ ಯೋಜನೆಯನ್ನು 1991ರಲ್ಲಿ ಮಂಜೂರು ಮಾಡಲಾಗಿದೆಯೆಂದು ಹೇಳಿದ್ದಾರೆ. ಕಳೆದ ಅಧಿವೇಶನದಲ್ಲಿ ಮಾನ್ಯ ಸಚಿವರು ಶಿಗ್ಗಾಂವ್ ಸವಣೂರು, ಬಂಕಾಪುರ ಯೋಜನೆಗಳಲ್ಲಿ ಬಂಕಾಪುರ ಪಟ್ಟಣವನ್ನು ಬಿಟ್ಟು ಯೋಜನೆ ಮಾಡಿದ್ದೇವೆಂದು ಹೇಳಿದ್ದಾರೆ. ಪುನಃ ಅದನ್ನು ತೆಗೆದುಕೊಂಡು ಪರಿಷ್ಕೃತ ಅಂದಾಜು ಪಟ್ಟಿಗೆ ಅನುಮೋದನೆ ದೊರಕಿಸಿಕೊಂಡು ಕೆಲಸ ಪ್ರಾರಂಭ ಮಾಡುತ್ತೇವೆ ಎಂದು ಭರವಸೆ ಕೊಟ್ಟಿದ್ದರು. ಆದರೆ ಇವತ್ತು ತಾವು ಕೊಟ್ಟ ಉತ್ತರದಲ್ಲಿ ನೋಡಿದರೆ ಶಿಗ್ಗಾಂವ್‌ಗೆ ಮಾತ್ರ ಸೀಮಿತಗೊಳಿಸಿ ನಾವು ಎರಡು ಪಟ್ಟಣಗಳನ್ನು ಪುನಃ ಬಿಡುತ್ತೇವೆಂದು ಉತ್ತರ ಕೊಟ್ಟಿದ್ದಾರೆ. ಒಂದೊಂದು ಅಧಿವೇಶನದಲ್ಲಿ ಒಂದೊಂದು ತರಹ ಉತ್ತರ ಕೊಟ್ಟರೆ ಸರ್ಕಾರದ ಮೇಲೆ ಸರಿಯಾದ ಜವಾಬ್ದಾರಿ ಇದೆಯೇ ಎಂಬ ಪ್ರಶ್ನೆಯನ್ನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳುತ್ತೇನೆ.

12. 10 ಪಿಎಂ.

ಶ್ರೀ ಬಿ.ಎನ್. ಬಚ್ಚೇಗೌಡ:- ಅಧ್ಯಕ್ಷರೇ, ಶಿಗ್ಗಾವಿ ಸವಣೂರು ಮತ್ತು ಬಂಕಾಪುರಗಳಿಗೆ ನೀರು ಒದಗಿಸಲು 1991ರಲ್ಲಿ 745 ಲಕ್ಷ ರೂಪಾಯಿಗಳಿಗೆ ಅನುಮೋದನೆ ದೊರಕಿತು ಅದರಲ್ಲಿ ನಾಗನೂರು ಅಂತ ವರದಾ ನದಿಯಿಂದ ನೀರು ತಂದು ಅಲ್ಲಿ ಶೇಖರಣೆ ಮಾಡಿ ಆ ನೀರನ್ನು ಮೂರು ಪಟ್ಟಣಗಳಿಗೆ ಕೊಡುವ ಕಾರ್ಯಕ್ಕಾಗಿ ಸುಮಾರು 65 ಎಕರೆ ಭೂಸ್ವಾಧೀನ ಮಾಡಿಕೊಳ್ಳಲಾಗಿದೆ. ಈ ಮೂರು ಯೋಜನೆಗಳಿಗೆ ರಿವೈಸ್ಡ್ ಎಸ್ಟಿಮೇಟ್ ಪ್ರಕಾರ ಈಗ 20.23 ಕೋಟಿ ರೂಪಾಯಿ ಆಗುತ್ತದೆ. ಈಗ ನಮ್ಮಲ್ಲಿರುವ ಏಳೂವರೆ ಕೋಟಿ ರೂ.ಗಳಲ್ಲಿ ನಾಗನೂರು ಕೆರೆಗೆ ಸುಮಾರು 6 ಕೋಟಿ ರೂ.ಗಳನ್ನು ಖರ್ಚುಮಾಡಿ ನೀರನ್ನು ಶೇಖರಣೆ ಮಾಡುವ ದೃಷ್ಟಿಯಿಂದ ಕೆರೆ ಸಿದ್ಧವಾಗಿದೆ ಮತ್ತು ಶಿಗ್ಗಾವಿಯ ಜನಸಂಖ್ಯೆ 25 ಸಾವಿರ. ಆದ್ದರಿಂದ ಉಳಿದ ಒಂದೂವರೆ ಕೋಟಿ ರೂಪಾಯಿಗಳ ಹಣದಲ್ಲಿ ಜಲಸಂಗ್ರಹಕಾರ, ಜಾಕ್ವೆಲ್, ಪಂಪಿಂಗ್‌ಹೌಸ ಇದಕ್ಕೆಲ್ಲ ಟೆಂಡರ್ ಕರೆದಿದ್ದು ಅದನ್ನು ಮುಗಿಸಿ, ಆಮೇಲೆ ಬಂಕಾಪುರದಲ್ಲಿ ತಮಗೆ ಗೊತ್ತಿರುವಂತೆ ಕೇವಲ 6 ಸಾವಿರ ಜನಸಂಖ್ಯೆ ಇದೆ. ಆರ್‌ಡಿಪಿಆರ್‌ನವರಿಗೆ ಹಣ ತೊಡಗಿಸಿ ಮಾಡಿಕೊಡಿ ಎಂದು ಕೇಳಿದ್ದಕ್ಕೆ ಅವರು ಒಪ್ಪಲಿಲ್ಲ. ಇನ್ನು ಸವಣೂರಿನಲ್ಲಿ ಜನಸಂಖ್ಯೆ ಇರುವುದು 33 ಸಾವಿರ, ಅಲ್ಲಿ ರಿವೈಸ್ಡ್ ಎಸ್ಟಿಮೇಟ್ ಪ್ರಕಾರ 13 ಕೋಟಿ ರೂಪಾಯಿ ಹೆಚ್ಚು ಹಣ ಇದಕ್ಕೆ ತುಂಬಬೇಕಾಗುತ್ತದೆ. ಅಷ್ಟು ಹೆಚ್ಚು ಹಣ ತುಂಬಲು ಸಾಧ್ಯವಿಲ್ಲವೆಂದುಕೊಂಡು ಈ ಯೋಜನೆಯನ್ನು ಶಿಗ್ಗಾವಿಗೆ ಸೀಮಿತವಾಗಿ ಇದನ್ನು ಮುಗಿಸಿಕೊಟ್ಟು ಅನಂತರ ಸವಣೂರಿನದು ತೆಗೆದುಕೊಳ್ಳುವುದೆಂದು ತೀರ್ಮಾನಿಸಿ ಇದನ್ನು ಬೇಗ ಮಾಡಿ ಮುಗಿಸುವ ಕಾರ್ಯ ಮಾಡುತ್ತಿದ್ದೇವೆ.

ಶ್ರೀ ಮಂಜುನಾಥ ಸಿ. ಕುನ್ನೂರು:- ಶಿಗ್ಗಾವಿ ಸೇರಿಸಿಯೇ 91 ರಲ್ಲಿ ಆಡಳಿತಾತ್ಮಕ ಮಂಜೂರಾತಿ ಕೊಡಲಾಗಿದೆ. ಬಂಕಾಪುರದಲ್ಲಿ ತಾವು ಹೇಳಿದಂತೆ 6 ಸಾವಿರ ಜನಸಂಖ್ಯೆ ಇಲ್ಲ 20

ಸಾವಿರಕ್ಕೂ ಮೇಲ್ಪಟ್ಟು ಇದೆ, ಅದೂ ರಾಷ್ಟ್ರೀಯ ಹೆದ್ದಾರಿಯಲ್ಲಿರುವುದು ಮತ್ತು ವರದಾ ನದಿಯಿಂದ ನೀರನ್ನು ಶಿಗ್ಗಾವಿಗೆ ತರಬೇಕಾದರೆ ಬಂಕಾಪುರ ಪಟ್ಟಣದ ಮೇಲೇ ತರಬೇಕಾಗುತ್ತದೆ. ಜೊತೆಗೆ ಸವಣೂರಿನಲ್ಲಿ ಈಗಾಗಲೇ 35 ಸಾವಿರ ಜನಸಂಖ್ಯೆ ಇದೆ. ಸವಣೂರು ಶಿಗ್ಗಾವಿಗಳಲ್ಲಿ ವಿಶೇಷವಾಗಿ ಅಲ್ಪಸಂಖ್ಯಾತರು ಹಿಂದುಳಿದ ಜನಾಂಗ ಜಾಸ್ತಿ ಇರುವುದರಿಂದ ಅತಿಯಾಗಿ ಕುಡಿಯುವ ನೀರಿನ ಸಮಸ್ಯೆ ಇರುವುದರಿಂದ ಮೊದಲು ಯಾವ ರೀತಿ ಯೋಜನೆ ಸಿದ್ಧಪಡಿಸಿದ್ದರೋ ಅದರ ಪರಿಷ್ಕೃತ ಅಂದಾಜಿಗೆ ಅನುಮೋದನೆ ಪಡೆದು ಹಿಂದಿನ ಸರ್ಕಾರದ ನಿರ್ಣಯವನ್ನು ತಾವೂ ಮುಂದುವರೆಸಬೇಕೆಂದು ನಾನು ಮತ್ತೊಮ್ಮೆ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ:- ಅಧ್ಯಕ್ಷರೇ ನಮಗಿರುವ ಆರ್ಥಿಕ ಇತಿಮಿತಿಯಲ್ಲಿ ರಿವೈಸ್ಡ್ ಎಸ್ಟಿಮೇಟನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇವೆ. ಮಾನ್ಯ ಸದಸ್ಯರು ನಮ್ಮಲ್ಲೆ ಬರಲಿ ಕುಳಿತು ಮಾತನಾಡತ್ತೇವೆ.

ಶ್ರೀ ಮಂಜುನಾಥ ಸಿ. ಕುನ್ನೂರು:- ಅಧ್ಯಕ್ಷರೆ, ಇದು 1991ನೇ ಇಸವಿಯಲ್ಲಿ ಪ್ರಾರಂಭವಾದ ಯೋಜನೆ 6.21 ಕೋಟಿ ಖರ್ಚು ಮಾಡಿದ್ದಾರೆ. ಇದಕ್ಕೆ ಸಂಬಂಧಿಸಿದ ಜಲಮಂಡಲಿ ಅಥವಾ ನಗರಾಭಿವೃದ್ಧಿ ಇಲಾಖೆ ಅಧಿಕಾರಿಗಳು ಈ ಯೋಜನೆಯಲ್ಲಿ ಒಂದು ಸಲ ಒಂದು ಗ್ರಾಮ ಬಿಡುವುದು, ಮತ್ತೊಂದು ತೆಗೆದುಕೊಳ್ಳುವುದು, ಇದು ಕೇವಲ ಶಿಗ್ಗಾವಿಗೆ ಸೀಮಿತವಾಗಿ ಮಾಡಿಕೊಂಡಿದ್ದಲ್ಲ ಇದು, ಇಡೀ ರಾಜ್ಯದಲ್ಲಿ ಇಂತಹ ಯೋಜನೆ ಎಲ್ಲೆಲ್ಲಿ ತೆಗೆದುಕೊಂಡಿದ್ದಾರೋ ಅಲ್ಲೆಲ್ಲಾ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲವೆಂದು ನೇರ ಆರೋಪವನ್ನು ನಾನು ಮಾಡುತ್ತಿದ್ದೇನೆ. 1991ರಲ್ಲಿ 7.45 ಕೋಟಿ ಆದರೆ ಇವತ್ತಿಗೆ ಅದು 20 ಕೋಟಿವರೆಗೆ ಆಗುವುದು ಸಹಜ, ಸ್ವಾಭಾವಿಕ. ಇದರ ಬಗ್ಗೆ ವಿಳಂಬಿಸದೆ ಶೀಘ್ರವಾಗಿ ನಮ್ಮ ಯೋಜನೆ ಜೊತೆಗೆ ರಾಜ್ಯದಲ್ಲಿ ಯಾವುವು ಇಂತಹ ಯೋಜನೆಗಳು ಪ್ರಾರಂಭವಾಗಿದೆಯೋ ಅವನ್ನು ಮಾಡಿ ಮುಗಿಸುವುದು ಸರ್ಕಾರದ ಆದ್ಯ ಕರ್ತವ್ಯ. ಇದರ ಬಗ್ಗೆ ಪುನಃ ಪರಿಶೀಲಿಸಿ ಕ್ರಮ ಮುಂದುವರೆಸಬೇಕೆಂದು ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಮತ್ತು ಈ ಯೋಜನೆಯಲ್ಲಿ ತಪ್ಪು ಮಾಹಿತಿ ಕೊಟ್ಟಿರುವ ಅಧಿಕಾರಿಗಳ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳಲು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ:- ಮಾನ್ಯ ಸದಸ್ಯರು ತಿಳಿಸಿದಂತೆ ಈಗ ಕಾರ್ಯ ನಡೆದಿರುವ ಯೋಜನೆಗಳನ್ನು 1997-98ಕ್ಕೆ ನಮ್ಮ ಆರ್ಥಿಕ ಇತಿಮಿತಿಯಲ್ಲಿ ಮುಗಿಸುವಂತಹ ಕಾರ್ಯ ಮಾಡುತ್ತೇವೆ ಮತ್ತು ಈ ಮೂರೂ ಯೋಜನೆಗಳ ಬಗ್ಗೆ ಮಾತನಾಡಲು ಮಾನ್ಯ ಸದಸ್ಯರು ನನ್ನ ಕೊಠಡಿಗೆ ಬಂದರೆ ಯಾವರೀತಿ ಆರ್ಥಿಕ ವ್ಯವಸ್ಥೆ ಮಾಡಬಹುದೆಂಬ ಬಗ್ಗೆ ಮಾತನಾಡಿ ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.